**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.647/2021**

**ಪಿ.ಡಬ್ಲ್ಯೂಃ 1**
**ಸಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ವಿಜಯಲಕ್ಷ್ಮೀ
ಗಂಡನ ಹೆಸರು : ಮಹೇಶ್
ವಯಸ್ಸು : 42 ವರ್ಷ
ಉದ್ಯೋಗ : ಶುಶ್ರೂಷಕಿ
ವಾಸಸ್ಥಳ : ಅರಸೀಕೆರೆ, ಹರಪನಹಳ್ಳಿ ತಾಲ್ಲೂಕು

**ದಿನಾಂಕಃ 15-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಘಟನೆ ನಡೆದ ಸಮಯದಲ್ಲಿ ನಾನು ತರೀಕೆರೆ ತಾಲ್ಲೂಕು ರಂಗೇನಹಳ್ಳಿಯಲ್ಲಿ ವಾಸವಾಗಿದ್ದೆ. ದಿಃ23.10.2018 ರಂದು ನಾನು ಯಥಾ ಪ್ರಕಾರ ನನ್ನ ಮಕ್ಕಳನ್ನು ಶಾಲೆಗೆ ಬಿಟ್ಟು ಆಸ್ಪತ್ರೆಗೆ ಕೆಲಸಕ್ಕೆ ಹೊರಟೆ ಮತ್ತು ಮಧ್ಯಾಹ್ನ 2.00 ಗಂಟೆಗೆ ಊಟಕ್ಕಾಗಿ ಮನೆಗೆ ಬಂದಿರುತ್ತೇನೆ. ಆ ಸಮಯದಲ್ಲಿ ಮನೆಯ ಬಾಗಿಲಿನ ಚಿಲಕ ಹಾಕಿದ್ದು, ಅದಕ್ಕೆ ಬೀಗ ಇರಲಿಲ್ಲ. ನಂತರ ನಾನು ಮನೆಯ ಒಳಗೆ ಹೋಗಿ ನೋಡಿದಾಗ ನಮ್ಮ ಬೆಡ್ ರೂಮಿನಲ್ಲಿ ಎರಡು ಬೀರುಗಳು ಇದ್ದು, ಎರಡೂ ಸಹ ತೆರೆದಿದ್ದು, ಅದರಲ್ಲಿ ಇಟ್ಟಿದ್ದ ನನ್ನ ಚಿನ್ನದ ಒಂದು ಜೊತೆ ಜುಮುಕಿ, ಒಂದು ಜೊತೆ ಪ್ಲೇಟು, ಮಕ್ಕಳ ಮೂರು ಉಂಗುರ ಹಾಗೂ ರೂ.10,000/- ನಗದು ರೂಪಾಯಿಗಳು ಕಾಣೆಯಾಗಿತ್ತು. ಸದರಿ ಚಿನ್ನದ ಒಡವೆಗಳ ಅಂದಾಜು ಬೆಲೆ ಸುಮಾರು ರೂ.25 ರಿಂದ 30 ಸಾವಿರ ರೂಪಾಯಿಗಳು ಇರಬಹುದು ಎಂದು ಸಾಕ್ಷಿ ನುಡಿದಿರುತ್ತಾರೆ. ನಂತರ ನಾನು ಲಕ್ಕವಳ್ಳಿ ಪೋಲೀಸ್ ಠಾಣೆಗೆ ದೂರು ನೀಡಿರುತ್ತೇನೆ.

ನಂತರ ಪೋಲೀಸರು ಘಟನಾ ಸ್ಥಳಕ್ಕೆ ಬಂದು ಪರಿಶೀಲಿಸಿದರು. ನಂತರ ರಾತ್ರಿ 7.00 ಗಂಟೆ ಸಮಯದಲ್ಲಿ **forensic department** ನಿಂದ ಪರೀಲನೆ ನಡೆಯಿತು, ಅಲ್ಲಿ ಘಟನಾ ಸ್ಥಳದ ಛಾಯಾಚಿತ್ರಗಳನ್ನು ತೆಗೆದರು. ನಂತರ ಕಳುವಾದ ವಸ್ತುಗಳ ಬಗ್ಗೆ ವರದಿಯನ್ನು ತಯಾರಿಸಿ ನನ್ನಿಂದ ಸಹಿಯನ್ನು ಪಡೆದರು. ಪೋಲೀಸರು ಸೋಫಾ ಮೇಲಿದ್ದ ಬೀಗವನ್ನು ತೆಗೆದುಕೊಂಡು ಹೋಗಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ದೂರು ಆಗಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಮಹಜರನ್ನು ಸಾಕ್ಷಿಯು

ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಸಾಕ್ಷಿಯು ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ (JAYKAY 8- LEVERS) ಎಂಬ ಹೆಸರಿನ ಸ್ಟೀಲ್ ಬೀಗವನ್ನು ತೋರಿಸಲಾಗಿ ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಮು.ಮಾ.1 ಎಂದು ಗುರುತಿಸಲಾಯಿತು. ನಂತರ ಲಕ್ಕವಳ್ಳಿ ಪೋಲೀಸರು ನನಗೆ 2021 ರಲ್ಲಿ ನನಗೆ ಕರೆ ಮಾಡಿ ನನ್ನ ಚಿನ್ನದ ಒಡವೆಗಳು ಸಿಕ್ಕಿದೆ ಎಂದು ತಿಳಿಸಿದರು ಮತ್ತುನಾನು ಅಲ್ಲಿಗೆ ಹೋಗಿ ನೋಡಿದಾಗ ಅವು ನನ್ನದೇ ಒಡವೆಗಳಾಗಿದ್ದು, ನಂತರ ನಾನು ಚಿನ್ನದ ಒಂದು ಜೊತೆ ಜುಮುಕಿ, ಒಂದು ಜೊತೆ ಪ್ಲೇಟು, ಮಕ್ಕಳ ಮೂರು ಉಂಗುರಗಳನ್ನು ನ್ಯಾಯಾಲಯದ ಮುಖಾಂತರ ನನ್ನ ವಶಕ್ಕೆ ಪಡೆದಿರುತ್ತೇನೆ.

*( ಚಿನ್ನದ ಒಂದು ಜೊತೆ ಜುಮುಕಿ, ಒಂದು ಜೊತೆ ಪ್ಲೇಟು, ಮಕ್ಕಳ ಮೂರು ಉಂಗುರವನ್ನು ಪುನಃ ಸಾಕ್ಷಿದಾರರ ವಶಕ್ಕೆ ನೀಡಲಾಗಿರುತ್ತದೆ.)*

***<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.</u>***

ರಂಗೇನಹಳ್ಳಿಯಲ್ಲಿ ಹೊಸಮನೆ ರೇವಣ್ಣ ಎಂಬುವವರ ಮನೆಯಲ್ಲಿ ನಾವು ಬಾಡಿಗೆಗೆ ಇದ್ದೆವು ಎಂದರೆ ಸರಿ. ಸದರಿ ಬಾಡಿಗೆ ಮನೆಯಲ್ಲಿ ನಾವು ವಾಸವಾಗಿದ್ದ ಬಗ್ಗೆ ಯಾವುದೇ ದಾಖಲಾತಿಯನ್ನು ಪೋಲೀಸರಿಗೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಬಾಡಿಗೆ ಮನೆಗೆ ಎರಡು ಬಾಗಿಲುಗಳು ಇವೆ ಎಂದರೆ ಸರಿ, ಸಾಕ್ಷಿಯು ಮುಂದುವರಿದು ಹಿಂಬಾಗಿಲು ಮತ್ತು ಮುಂಬಾಗಿಲು ಎಂದು ನುಡಿಯುತ್ತಾರೆ. ಬೀಗವನ್ನು ಯಾವ ಬಾಗಿಲಿದಿಂದ ತೆಗೆದಿರುತ್ತಾರೆ ಎಂದರೆ, ಸಾಕ್ಷಿಯು ಮುಂಬಾಗಿಲಿನಿಂದ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಬೀಗ ಹೊಡೆದಿದ್ದ ಬಾಗಿಲು ಯಥಾಸ್ಥಿತಿಯಲ್ಲಿತ್ತಾ? ಎಂದರೆ ಸಾಕ್ಷಿಯು ನಾನು ಬಾಗಿಲು ತೆಗೆದು ಒಳಗೆ ಹೋಗಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಬೀಗ ಎಲ್ಲಿ ಬಿದ್ದಿತ್ತು ಎಂದರೆ ಸಾಕ್ಷಿಯು ಒಳಗಡೆ ಬಿದ್ದಿತ್ತು ಎಂದು ನುಡಿಯುತ್ತಾರೆ. ಬೀಗವನ್ನು ಯಾರು ತೆಗೆದುಕೊಂಡರು ಎಂದರೆ, ಸಾಕ್ಷಿಯು ಪೋಲೀಸರು ಮಹಜರ್ ಮಾಡಿ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಬೀಗದ ಛಾಯಾಚಿತ್ರವನ್ನು ಪೋಲೀಸರು ತೆಗೆದಿರುತ್ತಾರೆ ಎಂದರೆ ಸರಿ. ಬೀಗದ ಛಾಯಾಚಿತ್ರ ತೆಗೆಯುವ ಸಮಯದಲ್ಲಿ ನೀವು ಅಲ್ಲಿದ್ದೀರಾ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಇದ್ದೆ ಆದರೆ ಛಾಯಾಚಿತ್ರದಲ್ಲಿ ಇಲ್ಲ ಎಂದು ನುಡಿಯುತ್ತಾರೆ.

**<u>ಸಿ.ಸಿ.ನಂ.647/2021</u>**

***ಪಿ.ಡಬ್ಲ್ಯೂ: 1, ಸಿ.ಡಬ್ಲ್ಯೂ:1***

ಬೀರುವನ್ನು ಇಂಟರ್ ಲಾಕ್ ಮಾಡಿದ್ದೆ ಎಂದರೆ ಸರಿ. ಚಿನ್ನದ ಒಡವೆಗಳನ್ನು ಎಲ್ಲಿ ಇಟ್ಟಿದ್ದಿರಿ ಎಂದರೆ, ಸಾಕ್ಷಿಯು ಸೇಫ್ಟಿ ಲಾಕರ್ ನಲ್ಲಿ ಒಂದು ಡಬ್ಬಿಯಲ್ಲಿ ಇಟ್ಟಿದ್ದೆ ಎಂದು ನುಡಿಯುತ್ತಾರೆ. ಬೀಗ ಹೊಡೆದ ಕೀಯನ್ನು ಮತ್ತು ಬೀರುವಿನ ಕೀಯನ್ನು ಪೋಲೀಸರಿಗೆ ಕೊಟ್ಟಿರುತ್ತೇನೆ ಎಂದರೆ ಸರಿ. ಬೀರುವಿನ ಹ್ಯಾಂಡಲ್ ಮತ್ತು ಬಾಗಿಲು ದೋಸೆ ಸುತ್ತುವ ರೀತಿ ತಿರುವಿತ್ತು ಎಂದು ಸಾಕ್ಷಿಯು ನುಡಿಯುತ್ತಾರೆ. ಆಭರಣಗಳು ಸಿಕ್ಕಿದ ವಿಚಾರವನ್ನು ತಿಳಿಸಿದ ಪೋಲೀಸರು ಆರೋಪಿಯನ್ನು ತೋರಿಸಿದರಾ? ಎಂದರೆ, ಸಾಕ್ಷಿಯು ಇಲ್ಲ ಎಂದು ನುಡಿದಿರುತ್ತಾರೆ.

ಯಾವುದೇ ಕಳ್ಳತನ್ನ ನಡೆಯುದಿದ್ದರೂ ಸಹ ನೀವೇ ನಿಮ್ಮ ಆಭರಣಗಳನ್ನು ಕಳೆದುಕೊಂಡು ಹುಡುಕಿಕೊಡಲು ಪೋಲೀಸರಿಗೆ ಸುಳ್ಳು ದೂರು ನೀಡಿರುತ್ತೀರಾ ಎಂದರೆ, ಸಾಕ್ಷಿಯು ಇಲ್ಲ ಎಂದು ನುಡಿದಿರುತ್ತಾರೆ. ನೀವು ಕೆಲಸಕ್ಕೆ ಹೋಗಿರುವ ವಿಚಾರದ ಬಗ್ಗೆ ಯಾವುದಾದರು ದಾಖಲೆಗಳನ್ನು ಪೋಲೀಸರಿಗೆ ಕೊಟ್ಟಿದ್ದೀರಾ? ಎಂದರೆ ಸಾಕ್ಷಿಯು ಪೋಲೀಸರು ಕೇಳಲಿಲ್ಲ, ಹಾಗಾಗಿ ಕೊಡಲಿಲ್ಲ ಎಂದು ನುಡಿಯುತ್ತಾರೆ.

<u>ಮರು ವಿಚಾರಣೆ: ಇರುವುದಿಲ್ಲ.</u>

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಕೇ. ಸ. ಇ. ಎ. ಒ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**